# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110
ದೂ. : 080–29566001, 080–27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

ಸಂ. ಬಿಐಎಎಪಿಎ/ಟಿಪಿ02/ಸಿಸಿ/30/2018–19 1845 ದಿನಾಂಕ: 23 SEP 2021

**"ಪ್ರಾರಂಭಿಕ ಪ್ರಮಾಣ ಪತ್ರ"**

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರನ್ವಯ)**

**(ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳ 1965 ರ ನಿಯಮ 30 ನಮೂನೆ 3 ರನ್ವಯ)**

**ವಿಷಯ:** ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹೊಸಹಳ್ಳಿ ಗ್ರಾಮದ ಸರ್ವೆ ನಂ. 132/1 ರಲ್ಲಿ 03ಎ–37ಗು, 132/2 ರಲ್ಲಿ 0ಎ–31ಗು, 133/1 ರಲ್ಲಿ 0ಎ–33ಗು, 133/2 ರಲ್ಲಿ 0ಎ–33ಗು, 133/3 ರಲ್ಲಿ 01ಎ–26ಗು, 135/1 ರಲ್ಲಿ 01ಎ–03ಗು, ಮತ್ತು 136/1 ರಲ್ಲಿ 01ಎ–02ಗು ಸೇರಿ ಒಟ್ಟು 10ಎಕರೆ–05ಗುಂಟೆ ಅಥವಾ 40974.77 ಚ.ಮೀ ವಿಸ್ತೀರ್ಣದ ಜಮೀನುಗಳಿಗೆ ಅನುಮೋದಿಸಲಾಗಿರುವ ಪರಿಷ್ಕೃತ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ನಮೂದಿಸಲಾಗಿರುವ ಕಟ್ಟಡ ಸಂಖ್ಯೆ : 1 (ಟವರ್ 01 ರಿಂದ 04) ರಲ್ಲಿ ಒಟ್ಟು 436 ವಸತಿ ಘಟಕಗಳಿಗೆ ಪರಿಷ್ಕೃತ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರವನ್ನು ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:**

| | |
|---|---|
| 1) ಅರ್ಜಿದಾರರ ಮನವಿ ದಿನಾಂಕ : | 24/11/2018 ಮತ್ತು 31/05/2021.. |
| 2) ಈ ಪ್ರಾಧಿಕಾರದ ಸಮ ಸಂಖ್ಯೆಯ ಪತ್ರ ದಿನಾಂಕ: | 21/06/2021. |
| 3) ಈ ಪ್ರಾಧಿಕಾರದ ಪತ್ರ ಸಂಖ್ಯೆ ಮತ್ತು ದಿನಾಂಕ: | ಬಿಐಎಎಪಿಎ/ಟಿಪಿ2/ಡಿಪಿ/05/2017–18/792, ದಿನಾಂಕ: 13/09/2021 |
| 4) ಮಾನ್ಯ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 12088/2021 (ಎಲ್‌ಬಿ–ಆರ್‌ಇಎಸ್) ನೀಡಿರುವ ಮಧ್ಯಂತರ ತೀರ್ಪಿನ ದಿನಾಂಕ: | 09/07/2021. |
| 5) ಅರ್ಜಿದಾರರ ಮನವಿ ಪತ್ರ ದಿನಾಂಕ: | 04/08/2021. |
| 6) ಪ್ರಾಧಿಕಾರಕ್ಕೆ ಶುಲ್ಕವನ್ನು ಪಾವತಿಸಿರುವ ವಿವರ : | ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ 0010558, ದಿನಾಂಕ: 05/08/2021, ರಂತೆ ಒಟ್ಟು ರೂ 41,000/– (ನಲವತ್ತೊಂದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಿರುತ್ತಾರೆ. |

******************

ಮೆ॥ ಸ್ಯಾಮೀಸ್ ಡ್ರೀಮ್‌ಲ್ಯಾಂಡ್ ಕಂಪನಿ ಪ್ರೈವೇಟ್ ಲಿಮಿಟೆಡ್ ರವರ ಪರವಾಗಿ ನೋಂದಾಯಿತ ಜಿಪಿಎದಾರರಾದ ಮೆ॥ಪೂರ್ವಾಂಕರ ಲಿಮಿಟೆಡ್ ರವರು ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹೊಸಹಳ್ಳಿ ಗ್ರಾಮದ ಸರ್ವೆ ನಂ. 132/1 ರಲ್ಲಿ 03ಎ–37ಗು, 132/2 ರಲ್ಲಿ 0ಎ–31ಗು, 133/1 ರಲ್ಲಿ 0ಎ–33ಗು, 133/2 ರಲ್ಲಿ 0ಎ–33ಗು, 133/3 ರಲ್ಲಿ 01ಎ–26ಗು, 135/1 ರಲ್ಲಿ 01ಎ–03ಗು, ಮತ್ತು 136/1 ರಲ್ಲಿ 01ಎ–02ಗು ಸೇರಿ ಒಟ್ಟು 10ಎಕರೆ–05ಗುಂಟೆ ಅಥವಾ 40974.77 ಚ.ಮೀ ವಿಸ್ತೀರ್ಣದ ಜಮೀನುಗಳಿಗೆ ಅನುಮೋದಿಸಲಾಗಿರುವ ಪರಿಷ್ಕೃತ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ನಮೂದಿಸಲಾಗಿರುವ ಕಟ್ಟಡ ಸಂಖ್ಯೆ : 1 (ಟವರ್ 01 ರಿಂದ 04) ರಲ್ಲಿ ಒಟ್ಟು 436 ವಸತಿ ಘಟಕಗಳಿಗೆ ಪರಿಷ್ಕೃತ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರವನ್ನು ಮಂಜೂರು ಮಾಡಲು ಕೋರಿ ಉಲ್ಲೇಖ (1) ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಈ ಹಿಂದೆ ಅನುಮೋದನೆ ನೀಡಲಾಗಿರುವ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಸೂಚಿಸಲಾಗಿರುವ ಕಟ್ಟಡ ಸಂಖ್ಯೆ: 01 (ಟವರ್ 1 ರಿಂದ 6) ರಲ್ಲಿ ಒಟ್ಟು 326 ವಸತಿ ಘಟಕಗಳ ಬದಲಾಗಿ (ಟವರ್ 1 ರಿಂದ 4) ರಲ್ಲಿ 436 ವಸತಿ ಘಟಕಗಳ ಕಟ್ಟಡಗಳನ್ನು ನಿರ್ಮಿಸುವ ಸಂಬಂಧ ಪ್ರಾಧಿಕಾರದಿಂದ ಪರಿಷ್ಕೃತ ವಸತಿ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರ ಮಂಜೂರು ಮಾಡುವ ಸಂಬಂಧ ಉಲ್ಲೇಖ (2) ರಂತೆ ಈ ಪ್ರಾಧಿಕಾರದ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ಅಗತ್ಯ ಶುಲ್ಕಗಳನ್ನು ಪಾವತಿಸಿ, ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಅರ್ಜಿದಾರರು/ಅಭಿಯಂತರರ ಸಹಿಗಳೊಂದಿಗೆ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಉಲ್ಲೇಖ (3) ರಂತೆ ಈ ಕಛೇರಿಯಿಂದ ವಸತಿ ಉಪಯೋಗದ ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ. ಉಲ್ಲೇಖ (4) ರ ಮಾನ್ಯ ಉಚ್ಛನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 12088/2021 (ಎಲ್‌ಬಿ–ಆರ್‌ಇಎಸ್) ರ ದಾವೆಯಲ್ಲಿ ಮಾನ್ಯ ನ್ಯಾಯಾಲಯವು ಪ್ರಾಧಿಕಾರದ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿನ ಕ್ರ.ಸಂ (3) ರಿಂದ (9) ರವರೆಗಿನ ಶುಲ್ಕಗಳನ್ನು ಪಾವತಿಸುವ ಸಂಬಂಧ ತಡೆಯಾಜ್ಞೆ ನೀಡಿ, ಉಳಿಕೆ ಶುಲ್ಕವನ್ನು ಪಾವತಿಸಿಕೊಂಡು ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಒಳಪಟ್ಟು ಪರಿಷ್ಕೃತ ಕಟ್ಟಡ ನಕ್ಷೆಯನ್ನು ಅನುಮೋದಿಸುವಂತೆ ಮಧ್ಯಂತರ ತೀರ್ಪನ್ನು ನೀಡಲಾಗಿರುತ್ತದೆ. ಉಲ್ಲೇಖ (5) ರಲ್ಲಿ ಅರ್ಜಿದಾರರು ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ತೀರ್ಪಿನ ಅನುಸಾರ Indemnity Bond ನ್ನು ಸಲ್ಲಿಸಿ, ಉಲ್ಲೇಖ (6) ರಂತೆ ಪ್ರಾಧಿಕಾರಕ್ಕೆ ಪರಿಶೀಲನಾ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸಿ, ಅನುಮೋದಿತ ಪರಿಷ್ಕೃತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ನಮೂದಿಸಿರುವ ಕಟ್ಟಡ ಸಂಖ್ಯೆ: 01 (ಟವರ್ 1 ರಿಂದ 4) ರಲ್ಲಿ ಒಟ್ಟು 436 ವಸತಿ ಘಟಕಗಳ ಕಟ್ಟಡಗಳನ್ನು ನಿರ್ಮಿಸುವ ಸಂಬಂಧ ಪ್ರಾಧಿಕಾರದಿಂದ ಪರಿಷ್ಕೃತ ವಸತಿ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರವನ್ನು ಮಂಜೂರು ಮಾಡಲು ಉದ್ದೇಶಿತ ಪರಿಷ್ಕೃತ ಕಟ್ಟಡದ ನಕ್ಷೆಯ ನೀಲಿ ಪ್ರತಿಗಳನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ವಯ ಮಾನ್ಯ ಉಚ್ಛನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 12088/2021 (ಎಲ್‌ಬಿ–ಆರ್‌ಇಎಸ್) ರಲ್ಲಿ ನೀಡುವ ಅಂತಿಮ ತೀರ್ಪಿಗೆ ಒಳಪಟ್ಟು ಶುಲ್ಕಗಳನ್ನು ಪಾವತಿಸಲು ಬದ್ಧರಾಗಿರತಕ್ಕದ್ದು ಎಂಬ ಷರತ್ತಿಗೊಳಪಟ್ಟು ಈ ಕಛೇರಿಯಿಂದ ಉಲ್ಲೇಖ (3) ರಂತೆ ಅನುಮೋದನೆ ನೀಡಲಾದ ವಸತಿ ಉಪಯೋಗದ **"ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಸೂಚಿಸಲಾದ ಕಟ್ಟಡ ಸಂಖ್ಯೆ: 01 (ಟವರ್ 1 ರಿಂದ 6) ರಲ್ಲಿ ಒಟ್ಟು 326 ವಸತಿ ಘಟಕಗಳ ಬದಲಾಗಿ (ಟವರ್ 1 ರಿಂದ 4) ರಲ್ಲಿ 436 ವಸತಿ ಘಟಕಗಳ ಕಟ್ಟಡಗಳನ್ನು"** ನಿರ್ಮಿಸುವ ಸಂಬಂಧ ಈ ಕೆಳಕಂಡ ನಿಬಂಧನೆಗಳೊಂದಿಗೆ ಪರಿಷ್ಕೃತ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರವನ್ನು ಮಂಜೂರು ಮಾಡಲಾಗಿದೆ.

## ನಿಬಂಧನೆಗಳು

1. ಮಾನ್ಯ ಉಚ್ಛನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 12088/2021 (ಎಲ್‌ಬಿ–ಆರ್‌ಇಎಸ್) ರಲ್ಲಿ ನೀಡುವ ಅಂತಿಮ ತೀರ್ಪಿಗೆ ಒಳಪಟ್ಟು ಶುಲ್ಕಗಳನ್ನು ಪಾವತಿಸಲು ಬದ್ಧರಾಗಿರತಕ್ಕದ್ದು.
2. ಪ್ರಾಧಿಕಾರದ ಪ್ರಾರಂಭಿಕ ಪ್ರಮಾಣ ಪತ್ರ ಸಂಖ್ಯೆ : ಬಿಐಎಎಪಿಎ/ಟಿಪಿ02/ಸಿಸಿ/30/2018–19/1784, ದಿನಾಂಕ: 06/12/2018 ರನ್ವಯ ಕಟ್ಟಡ ಸಂಖ್ಯೆ: 01 (ಟವರ್ 1 ರಿಂದ 6) ರಲ್ಲಿ 326 ಮತ್ತು ಕಟ್ಟಡ ಸಂಖ್ಯೆ: 02 (ಟವರ್ 7 ರಿಂದ 14) ರಲ್ಲಿ 436 ವಸತಿ ಘಟಕಗಳು ಒಳಗೊಂಡಂತೆ ಒಟ್ಟು 762 ವಸತಿ ಘಟಕಗಳ ಕಟ್ಟಡಗಳನ್ನು ನಿರ್ಮಿಸಲು ಪ್ರಾರಂಭಿಕ ಪ್ರಮಾಣ ಪತ್ರ ಮಂಜೂರು ಮಾಡಲಾಗಿದ್ದು, ಈ ಹಿಂದೆ ಅನುಮೋದನೆ ನೀಡಲಾದ ಕಟ್ಟಡ ಸಂಖ್ಯೆ: 02 (ಟವರ್ 7 ರಿಂದ 14) ರಲ್ಲಿ 436 ವಸತಿ ಘಟಕಗಳನ್ನು ಯಥಾವತ್ತಾಗಿ ಕಾಯ್ದಿರಿಸಲಾಗಿದ್ದು, ಉಳಿದಂತೆ ಕಟ್ಟಡ ಸಂಖ್ಯೆ: 01 (ಟವರ್ 1 ರಿಂದ 6) ರಲ್ಲಿ 326 ವಸತಿ

ನಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

ಘಟಕಗಳ ಬದಲಾಗಿ (ಟವರ್ 1 ರಿಂದ 4) ರಲ್ಲಿ ಒಟ್ಟು 436 ವಸತಿ ಘಟಕಗಳುಳ್ಳ ಕಟ್ಟಡಗಳಿಗೆ ಮಾತ್ರ ಪರಿಷ್ಕೃತ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಲು ಪರಿಗಣಿಸಲಾಗಿರುತ್ತದೆ.

3. ಉಲ್ಲೇಖ (3) ರಂತೆ ವಸತಿ ಉಪಯೋಗದ ಪರಿಷ್ಕೃತ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಲಾಗಿದ್ದು, ಅನುಮೋದನೆಗೆ ಸಂಬಂಧಿಸಿದಂತೆ ವಿಧಿಸಲಾದ ಎಲ್ಲಾ ನಿಬಂಧನೆಗಳನ್ನು ಅರ್ಜಿದಾರರು ತಪ್ಪದೇ ಪಾಲಿಸತಕ್ಕದ್ದು.
4. ಯೋಜಿಸಿರುವ ಕಟ್ಟಡವನ್ನು 'ವಸತಿ' ಉದ್ದೇಶಕ್ಕಾಗಿಯೇ ಉಪಯೋಗಿಸಬೇಕು.
5. ಈ ಪ್ರಾರಂಭಿಕ ಪ್ರಮಾಣ ಪತ್ರವನ್ನು ಎರಡು ವರ್ಷದ ಅವಧಿಗೆ ಅಂದರೆ **ದಿನಾಂಕ: 23/09/2021** ರಿಂದ **22/09/2023** ರವರೆಗೆ ಮಾತ್ರ ನೀಡಲಾಗಿರುತ್ತದೆ.
6. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಪ್ರಕಾರ ಇದು ಪ್ರಾರಂಭಿಕ ಪ್ರಮಾಣ ಪತ್ರವಾಗಿದ್ದು, ಈ ಪತ್ರದ ಅಧಾರದ ಮೇಲೆ ಅವಶ್ಯಕವಾಗಿರುವ ಖಾತೆ / ಇತರೆ ಪರವಾನಿಗೆಯನ್ನು **ಸಾತನೂರು ಗ್ರಾಮ** ಪಂಚಾಯ್ತಿರವರಿಂದ ಪಡೆಯದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬಾರದು.
7. ಕಟ್ಟಡ ಕಟ್ಟಲು ಪರವಾನಿಗೆಯನ್ನು **ಸಾತನೂರು ಗ್ರಾಮ** ಪಂಚಾಯ್ತಿಯಿಂದ ಪಡೆಯಬೇಕು.
8. ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿ ಹಾಗೂ ಕಟ್ಟಡದ ವಿಧಿಯ ಪ್ರಕಾರ ಕಟ್ಟಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಪ್ರಾರಂಭಿಕ ಪ್ರಮಾಣ ಪತ್ರದ ಮೂಲಕ ಅನುಮೋದಿಸಿರುವ ನಕ್ಷೆಯಂತೆಯೇ ಕೈಗೊಳ್ಳಬೇಕು. ಬೆಳವಣಿಗೆಯಲ್ಲಿನ ಯಾವುದೇ ಬದಲಾವಣೆಯನ್ನು ಈ ಕಛೇರಿಯ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.
9. 'ವಸತಿ' ಉಪಯೋಗಕ್ಕೆ ಕಟ್ಟಡ ಕಟ್ಟಲು ನಕ್ಷೆಯಲ್ಲಿ ಬಿಟ್ಟಿರುವಂತೆ ನಡುಜಾಗವನ್ನು ಬಿಟ್ಟು ಕಟ್ಟಡ ಕಟ್ಟತಕ್ಕದ್ದು.
10. ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ. ಹಾಗೂ ಅಗ್ನಿಶಾಮಕ ಇಲಾಖೆಯಿಂದ ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ: ಜಿ.ಬಿ.ಸಿ(1) 215/2017 ಡಾಕೇಟ್ ನಂ. ಕೆ.ಎಸ್.ಎಫ್.ಇ.ಎಸ್/ಎನ್‌ಒಸಿ/321/2020. ದಿನಾಂಕ: 15/04/2021 ರಲ್ಲಿ ವಿಧಿಸಿರುವ ಎಲ್ಲಾ ನಿಬಂಧನೆಗಳನ್ನು ಅರ್ಜಿದಾರರು ತಪ್ಪದೇ ಪಾಲಿಸತಕ್ಕದ್ದು,
11. ಕಟ್ಟಡ ಭದ್ರತೆಯ ಕುರಿತು ನುರಿತ (Structural Engineer) ತಜ್ಞರಿಂದ Structural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.
12. ಪ್ರಸ್ತಾವನೆ ಸಂಬಂಧ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ರವರ ಪತ್ರ ಸಂಖ್ಯೆ:ಅಇಂ(ವಿ)/ಬೆಗ್ರಾವೃ/ಕಾಇಂ(ಕ)/ಸಕಾಇಂ-1/17-18/4511-12 ದಿನಾಂಕ; 23/12/2017 ರಂದು ನಿರಾಕ್ಷೇಪಣಾ ಪತ್ರ ಪಡೆದಿದ್ದು, ಸದರಿ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಂಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
13. ಪ್ರಸ್ತಾವನೆ ಸಂಬಂಧ ಭಾರತ್ ಸಂಚಾರ ನಿಗಮ ಲಿಮಿಟೆಡ್ ರವರ ಪತ್ರ ಸಂಖ್ಯೆ: AGM(TP)/S-6/vol-61/217-18/14, ದಿನಾಂಕ: 20/12/2017 ರಂದು ನಿರಾಕ್ಷೇಪಣಾ ಪತ್ರ ಪಡೆದಿದ್ದು, ಸದರಿ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಂಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
14. ಪ್ರಸ್ತಾವನೆ ಸಂಬಂಧ ಏರ್‌ಪೋರ್ಸ್ ಸ್ಟೇಷನ್, ಯಲಹಂಕ ರವರ ಪತ್ರ ಸಂಖ್ಯೆ: ಟಿಸಿ/14758/2/ಎಟಿಸಿ/(ಟಿವ್ಯೆ ಬಿಎಂ-ಡಿಸಿಸಿಎಲ್‌ಎಕ್ಸ್‌ಎಕ್ಸ್‌ವಿ) ದಿನಾಂಕ: 09/09/2021 ರಂದು

ನಿರಾಕ್ಷೇಪಣಾ ಪತ್ರ ಪಡೆದಿದ್ದು, ಸದರಿ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಂಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

15. ಪ್ರಸ್ತಾವನೆ ಸಂಬಂಧ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾರವರಿಂದ ದಿನಾಂಕ: 21/08/2017 ರಂದು ನಿರಾಕ್ಷೇಪಣಾ ಪತ್ರ ಪಡೆದಿದ್ದು, ಸದರಿ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಂಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
16. ಪ್ರಸ್ತಾವನೆ ಸಂಬಂಧ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರ ಪತ್ರ ಸಂಖ್ಯೆ: ಪಿಸಿಬಿ/781/ಸಿಎನ್‌ಪಿ/17/5447 ದಿನಾಂಕ: 01/03/2021 ರಂದು ನಿರಾಕ್ಷೇಪಣಾ ಪತ್ರ ಪಡೆದಿದ್ದು, ಸದರಿ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಂಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
17. ಪ್ರಸ್ತಾವನೆ ಸಂಬಂಧ State Level Environment Impact Assessment Authority ಇಲಾಖೆಯ ನಿರಾಕ್ಷೇಪಣಾ ಪತ್ರ ಸಂಖ್ಯೆ: SEIAA 137 CON 2017, ದಿನಾಂಕ: 22/03/2018 ಮತ್ತು ತಿದ್ದುಪಡಿ ನಿರಾಕ್ಷೇಪಣಾ ಪತ್ರ ಸಂಖ್ಯೆ: SEIAA 137 CON 2017, ದಿನಾಂಕ: 22/02/2021 ರಗಳಲ್ಲಿ ನಿರಾಕ್ಷೇಪಣಾ ಪತ್ರ ಪಡೆದಿದ್ದು, ಸದರಿ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಂಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
18. ಕಾಮಗಾರಿಗಳಿಂದಾಗಿ ಪರಿಸರವು ಮಾಲಿನ್ಯವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಸ್ವಾಭಾವಿಕ ಮಳೆಯ ನೀರು ಇಂಗಿ ಹೋಗಲು ವ್ಯವಸ್ಥೆ (Rain Water harvesting) ಯನ್ನು ಮಾಡತಕ್ಕದ್ದು ಮತ್ತು ಸೌರಶಕ್ತಿ ವ್ಯವಸ್ಥೆಯನ್ನು ಕಟ್ಟಡದಲ್ಲಿ ಒದಗಿಸತಕ್ಕದ್ದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ನಿವೇಶನದ ಮುಂಭಾಗದಲ್ಲಿ ಗಿಡ/ಮರವನ್ನು ಬೆಳೆಸತಕ್ಕದ್ದು.
19. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ water (Prevention and Control of Pollution) Act 1974 ರ ಕಲಂ 25 ರ ರೀತ್ಯ ಸೂಕ್ತ ಪ್ರಮಾಣದ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಲು consent for Establishment ಪೂರ್ವಾನುಮತಿ ಪಡೆಯದೇ ಪ್ರಶ್ನಿತ ನಿವೇಶನ / ಜಾಗದಲ್ಲಿ ನೆಲ ಅಗಿಯುವಿಕೆ ಒಳಗೊಂಡಂತೆ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಅಥವಾ ವಸತಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದಲ್ಲ. ಉದ್ದೇಶಿತ ಕಟ್ಟಡ / ನೆಲ ಅಭಿವೃದ್ಧಿ ಕಾಮಗಾರಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ consent for Establishment ಅನುಮತಿ ಪಡೆಯತಕ್ಕದ್ದು.
20. ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ-2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.
21. ಈ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.
22. ಈ ಪ್ರಾರಂಭಿಕ ಪ್ರಮಾಣ ಪತ್ರದೊಡನೆ ಅನುಮೋದಿಸಲ್ಪಟ್ಟಿರುವ ನಕ್ಷೆಯು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.
23. ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದು.
24. ಈ ಪ್ರಾಧಿಕಾರದ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

d:\system-12\2021-22\building\tp-2\cc prarambhika pramana patra.doc

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110
ದೂ. : 080–29566001, 080–27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

25. ಈ ಅನುಮತಿಯನ್ನು ಉಲ್ಲಂಘಿಸಿ ಅಭಿವೃದ್ಧಿಯನ್ನು ಕೈಗೊಂಡರೆ ಅಥವಾ ನೀಡಿರುವ ಮಾಹಿತಿಗಳು ದೋಷ ಪೂರ್ಣವಾಗಿದ್ದರೆ ಅನುಮತಿಯನ್ನು ಹಿಂತೆಗೆದುಕೊಳ್ಳಲಾಗುವುದಲ್ಲದೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು.
26. ಅಂತರಾಷ್ಟ್ರೀಯ ವಾಯು ನೆಲೆಯ ಪರಿಸರದಲ್ಲಿ ಬರುವುದರಿಂದ ಶಬ್ದಮಾಲಿನ್ಯ ಸಹಿಸಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.
27. ಇತರೆ ಇಲಾಖೆಗಳಿಂದ ಅಗತ್ಯವಿರುವ ಅನುಮತಿ/ನಿರಾಕ್ಷೇಪಣಾ ಪತ್ರಗಳನ್ನು ಸಹ ಪಡೆಯತಕ್ಕದ್ದು.
28. ಅರ್ಜಿದಾರರು ಸಲ್ಲಿಸಿರುವ ಮಾಹಿತಿ/ದಾಖಲಾತಿಗಳು ಸುಳ್ಳು ಅಥವಾ ಪೋರ್ಜರಿಗಳಾಗಿದ್ದರೆ ಈ ಕಛೇರಿಯಿಂದ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರವು ತಂತಾನೆ ರದ್ದಾಗುತ್ತದೆ.

20.9.21

**ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ

*ಇವರಿಗೆ:*

**ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು,**
ಸಾತನೂರು ಗ್ರಾಮ ಪಂಚಾಯ್ತಿ,
ಜಾಲ ಹೋಬಳಿ, ಯಲಹಂಕ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ.

ಕಟ್ಟಡ ನಕ್ಷೆಯ 4 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.

**ಪ್ರತಿಯನ್ನು:**

1. ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ. 1/14, 2 ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ ಕಾಂಪೌಂಡ್, 3 ನೇ ಕ್ರಾಸ್ ಮಿಷನ್ ರಸ್ತೆ, ಬೆಂಗಳೂರು–560027 ರವರ ಮಾಹಿತಿಗಾಗಿ.
2. ಮೆ॥ ಸ್ಯಾಮೀಸ್ ಡ್ರೀಮ್‌ಲ್ಯಾಂಡ್ ಕಂಪನಿ ಪ್ರೈವೆಟ್ ಲಿಮಿಟೆಡ್ ರವರ ಪರವಾಗಿ ನೋಂದಾಯಿತ ಜಿಪಿಎದಾರರಾದ ಮೆ॥ಪೂರ್ವಾಂಕರ ಲಿಮಿಟೆಡ್, #130/1, ಹಲಸೂರು ರಸ್ತೆ, ಬೆಂಗಳೂರು–5600042 ರವರ ಮಾಹಿತಿಗಾಗಿ.
3. ಕಛೇರಿ ಪ್ರತಿ.

d:\system-12\2021-22\building\tp-2\cc prarambhika pramana patra.doc